ದಿನಾಂಕಃ -09-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ ಆರ್ ಎನ್ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ ಅದರಲ್ಲಿ ಹೇಳಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಅದಕ್ಕೆ ನಾನೇ ಸಹಿ ಮಾಡಿರುತ್ತೇನೆ ಮತ್ತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

| | |
|---|---|
| ನಿಪಿ-1 | ಅರ್ಜಿದಾರರ ಆಧಾರ್ ಕಾರ್ಡ್ ನ ದೃಡೀಕೃತ ಪ್ರತಿ (ಮೂಲ ದಾಖಲೆಯೊಂದಿಗೆ ಪರಿಶೀಲಿಸಿ ಹಿಂದಿರುಗಿಸಲಾಯಿತು ) |
| ನಿಪಿ-2 | ಸರ್ವೇ ನಂ.129/4 ರತ್ನಸಂದ್ರ ಗ್ರಾಮದ ಆರ್ ಟಿ ಸಿ |
| ನಿಪಿ-3 | ರತ್ನ ಸಂದ್ರ ಗ್ರಾಮದ ಸಬ್ ರಿಜಿಸ್ಟರ್ ರವರ ಎಸ್ ಆರ್ ವ್ಯಾಲ್ಯೂ ದೃಡೀಕೃತ ಪ್ರತಿ ( ಮೂಲ ದಾಖಲೆಯೊಂದಿಗೆ ದೃಡೀಕೃತ ಪ್ರತಿಯನ್ನು ಪರಿಶೀಲಿಸಿ ಮೂಲ ದಾಖಲೆಯನ್ನು ಹಿಂದಿರುಗಿಸಲಾಯಿತು) |

ಅರ್ಜಿಯನ್ನು ಪುರಸ್ಕರಿಸಬೇಕೆಂದು ನ್ಯಾಯಾಲಯಕ್ಕೆ ಪ್ರಾರ್ಥಿಸುತ್ತೇನೆ.

ಪಾಟೀ ಸವಾಲು ಎದುರುದಾರರ ಪರ ಶ್ರೀ ಎಸ್ ಆರ್ ವಕೀಲರಿಂದಃ-

ನಾನು 7 ನೇ ತರಗತಿಯವರಿಗೆ ವಿದ್ಯಾಭ್ಯಾಸ ಮಾಡಿರುತ್ತೇನೆ, ನನಗೆ ಓದಲು ಬರೆಯಲು ಬರುತ್ತದೆ. ಅರ್ಜಿ ಜಮೀನು ನನ್ನ ಹೆಸರಿನಲ್ಲಿರುತ್ತದೆ. ನಮ್ಮ ಜಮೀನಿನ ಸರ್ವೇ ನಂ.129/4 . ಅರ್ಜಿ ಸ್ವತ್ತಿನ ಜಮೀನಿನಲ್ಲಿ 40 ಹುಣಸೇ ಮರ, 12 ಹೊಂಗೆ ಮರ, 3 ತುಗಲಿ ಮರ ಮತ್ತು 1 ಎಕರೆಗೆ ಶೇಂಗ ಬೆಳೆ ಬೆಳೆಯುತ್ತಿದ್ದೇವು. ಸದರಿ ಮರ ಮತ್ತು ಬೇಳೆ ಬೆಳೆಯುತ್ತಿದ್ದ ಬಗ್ಗೆ ಯಾವುದೇ ದಾಖಲಾತಿಗಳು ಇಲ್ಲ. ನಾನು ಜಮೀನಿನಲ್ಲಿ ಯಾವುದೇ ಮರಗಳು ಇಲ್ಲದಿದ್ದರೂ ಮತ್ತು ಯಾವುದೇ ಬೆಳೆ ಬೆಳೆಯದಿದ್ದರು ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ . ಎದುರುದಾರರು ಲೈನ್ ಎಳೆಯುವ ಪೂರ್ವದಲ್ಲಿ ನಿಮಗೆ ನೋಟೀಸ್ ಕೊಟ್ಟಿದ್ದರು ಅಂದರೆ ಸರಿಯಲ್ಲ.

ತಮಗೆ ಪರಿಹಾರದ ಹಣವಾಗಿ ರೂ.1,60,000-00 ಗಳನ್ನು ಪಡೆದಿರುತ್ತೇನೆ . ಪರಿಹಾರದ ಹಣವು ನನ್ನ ಹೆಸರಿಗೆ ಬಂದಿರುತ್ತದೆ. ಸದರಿ ಪರಿಹಾರದ ಹಣವನ್ನು ಜಿಲ್ಲಾಧಿಕಾರಿಗಳ ಆದೇಶದ ಮೇಲೆ ನೀಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ . ನಾನು ಈ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಜಿಲ್ಲಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿದ್ದೀರ ಅಂದರೆ ಇಲ್ಲ . ಎದುರುದಾರ ಸಂಸ್ಥೆಯವರು ನಮ್ಮ ಜಮೀನಿನಲ್ಲಿ ಲೈನ್ ನ್ನು ಮಾತ್ರ ಎಳೆದಿರುತ್ತಾರೆ ಅರ್ಜಿ ಸ್ವತ್ತಿಗೆ ಎದುರುದಾರ ಸಂಸ್ಥೆಯವರು ನ್ಯಾಯಯುತವಾದ ಪರಿಹಾರವನ್ನು ನೀಡಿದ್ದರು ಸಹ ನಾವು ಎದುರುದಾರರ ವಿರುದ್ದ ಸುಳ್ಳು ಕೇಸ್ ಹಾಕಿದ್ದೇವೆ ಅಂದರೆ ಸರಿಯಲ್ಲ .ಅರ್ಜಿಯ ಜಮೀನಿನಲ್ಲಿ ಇದ್ದ ಮರಗಳ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸದ ಕಾರಣ ಅವುಗಳಿಗೆ ಪರಿಹಾರವನ್ನು ನೀಡಲು ಬರುವುದಿಲ್ಲ ಅಂದರೆ ಸರಿಯಲ್ಲ . ನನ್ನ ಸಾಕ್ಷಿಯ ಪ್ರಮಾಣ ಪತ್ರದಲ್ಲಿ ಅರ್ಜಿ ಸ್ವತ್ತಿನಲ್ಲಿದ್ದ ಮರಗಳಿಂದ ಬರುತ್ತಿದ್ದ ಆದಾಯದ ಬಗ್ಗೆ ಯಾವುದೇ ದಾಖಲಾತಿಗಳನ್ನು ಒದಗಿಸಿಲ್ಲ ಅಂದರೆ ಸರಿ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತೀರುವುದರಿಂದ ನಾನು ಯಾವುದೇ ಹೆಚ್ಚಿನ ಪರಿಹಾರವನ್ನು ಪಡೆಯಲು ಅರ್ಹರಲ್ಲ ಅಂದರೆ ಸರಿಯಲ್ಲ . ನಿಪಿ-3 ಗೂ ಮತ್ತು ಅರ್ಜಿಯ ಸ್ವತ್ತಿಗೂ ಯಾವುದೇ ಸಂಬಂದವಿಲ್ಲ ಅಂದರೆ ಸರಿಯಲ್ಲ .

– ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

6 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.